

ಕ್ರಿಕೆಟ್‌ಗೆ ವಿದಾಯ ಹೇಳುವ ಮುನ್ನ ಸಚಿನ್ ತೆಂಡೂಲ್ಕರ್ ಕೂಡ ಸಲಹೆ ನೀಡಿದ್ದರು.

ಐದು ದಿನ ಬಿರುಬಿಸಿಲಿನಲ್ಲಿ ಕುಳಿತು ಆಟವನ್ನು ನೋಡುವ ತಾಳ್ಮೆಯನ್ನು ಪ್ರೇಕ್ಷಕರು ಕಳೆದುಕೊಂಡಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಬಹುತೇಕ ಖಾಲಿ ಕ್ರೀಡಾಂಗಣದಲ್ಲಿ ಟೆಸ್ಟ್ ಪಂದ್ಯಗಳು ನಡೆಯುತ್ತಿವೆ. ಟ್ವೆಂಟಿ–20 ಕ್ರಿಕೆಟ್‌ನ ಅಬ್ಬರ, ಐಪಿಎಲ್ ಕ್ರಿಕೆಟ್‌ನ ಮನರಂಜನೆ ಸೆಳೆತಕ್ಕೆ ಮಾರು ಹೋಗಿರುವ ಪ್ರೇಕ್ಷಕರು ಟೆಸ್ಟ್ ಪಂದ್ಯಗಳನ್ನು ಸಂಪೂರ್ಣ ನಿರ್ಲಕ್ಷಿಸುತ್ತಿದ್ದಾರೆ. ಕ್ರಿಕೆಟ್ ಮಂಡಳಿಗಳಿಗೆ ಆದಾಯವೂ ಬರುತ್ತಿಲ್ಲ.

ಐದು ಪಂದ್ಯಗಳ ಟೆಸ್ಟ್ ಸರಣಿಗಿಂತ ಭಾರತ–ಪಾಕ್ ನಡುವೆ ಒಂದು ಟ್ವೆಂಟಿ–20 ಪಂದ್ಯ ನಡೆಸಿದರೆ ಹೆಚ್ಚು ಆದಾಯ ಬರುವಂಥ ಕಾಲವಿದು. ಇದೇ ಕಾರಣಕ್ಕಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಹೊಸ ದಾರಿ ಕಂಡುಕೊಳ್ಳಲು ಹಲವು ಪ್ರಯೋಗ ಮಾಡುತ್ತಿದೆ. ಅದರಲ್ಲೊಂದು ಹೊನಲು ಬೆಳಕಿನ ಟೆಸ್ಟ್ ಆಯೋಜನೆ.

## ಆಸೀಸ್ - ಕಿವೀಸ್ ನಡುವಿನ ಆ ಪಂದ್ಯ

2015ರ ನವೆಂಬರ್‌ನಲ್ಲಿ ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್ ನಡುವೆ ಆಡಿಲೇಡ್‌ನಲ್ಲಿ ಹೊನಲು ಬೆಳಕಿನ ಮೊದಲ ಟೆಸ್ಟ್ ನಡೆದಿತ್ತು. ಆ ಮೂಲಕ ಐತಿಹಾಸಿಕ ಕ್ಷಣಕ್ಕೆ ಟೆಸ್ಟ್ ಕ್ರಿಕೆಟ್ ಸಾಕ್ಷಿಯಾಗಿತ್ತು. ಆ ಪಂದ್ಯವನ್ನು ಕ್ರೀಡಾಂಗಣದಲ್ಲಿ ಸುಮಾರು 40 ಸಾವಿರ ಪ್ರೇಕ್ಷಕರು ವೀಕ್ಷಿಸಿದ್ದರು. ಟಿ.ವಿ ಮೂಲಕ ಕೋಟ್ಯಂತರ ಮಂದಿ ಕಣ್ತುಂಬಿಕೊಂಡಿದ್ದರು. ಆ ಪಂದ್ಯ ಮೂರೇ ದಿನಗಳಲ್ಲಿ ಕೊನೆಗೊಂಡಿತ್ತು. ಆತಿಥೇಯ ಕಾಂಗರೂ ಪಡೆ ಗೆಲುವು ಸಾಧಿಸಿತ್ತು.

ಕಳೆದ ವಾರ ಇಂಗ್ಲೆಂಡ್‌ನಲ್ಲೂ ಇಂಥ ಪ್ರಯೋಗ ನಡೆಸಲಾಗಿದೆ. ಆಂಗ್ಲರ ಬಳಗ ವೆಸ್ಟ್‌ಇಂಡೀಸ್ ಎದುರು ಹೊನಲು ಬೆಳಕಿನಲ್ಲಿ ಟೆಸ್ಟ್ ಪಂದ್ಯ ಆಡಿದೆ.

2015ರಲ್ಲಿ ಇಂಥದ್ದೊಂದು ಶಿಫಾರಸ್ಸು ಮಾಡಿದ್ದೇ ಅನಿಲ್ ಕುಂಬ್ಳೆ ಸಾರಥ್ಯದ ಐಸಿಸಿ ಕ್ರಿಕೆಟ್ ಸಮಿತಿ. ಟೆಸ್ಟ್‌ಗೆ ಹೊಸ ರೂಪ ನೀಡುವುದರಿಂದ ಈ ಮಾದರಿಯ ಆಟವನ್ನು ಜೀವಂತವಾಗಿರಿಸಿಕೊಳ್ಳಬಹುದು, ಹೆಚ್ಚು ಪ್ರೇಕ್ಷಕರನ್ನು ಸೆಳೆಯಬಹುದು, ಕ್ರಿಕೆಟ್ ಭವಿಷ್ಯ ಗಟ್ಟಿಯಾಗಲಿದೆ ಎಂಬುದು ಅವರ ಸಲಹೆಯಾಗಿತ್ತು. ಉದ್ಯೋಗಿಗಳು ಹಾಗೂ ವಿದ್ಯಾರ್ಥಿಗಳು ರಾತ್ರಿ ವೇಳೆ ಟೆಸ್ಟ್ ವೀಕ್ಷಿಸಬಹುದು.

## ಲಂಚ್ ಬದಲಿಗೆ ಡಿನ್ನರ್

ಈಗಿರುವ ಸ್ವರೂಪದಲ್ಲಿ ಭಾರತದಲ್ಲಿ ಬೆಳಿಗ್ಗೆ 9.30ಕ್ಕೆ ಟೆಸ್ಟ್ ಪಂದ್ಯ ಆರಂಭವಾಗುತ್ತದೆ. 11.30ರಿಂದ 12.10ರವರೆಗೆ ಲಂಚ್ ವಿರಾಮ, 2.10ರಿಂದ 2.30ರವರೆಗೆ ಚಹಾ ವಿರಾಮ ಹಾಗೂ 4.30ಕ್ಕೆ ದಿನದಾಟ ಮುಗಿಯುತ್ತದೆ. ಆದರೆ, ಹೊನಲು ಬೆಳಕಿನ ಪಂದ್ಯ ಮಧ್ಯಾಹ್ನ 2 ಗಂಟೆಗೆ ಆರಂಭವಾಗಿ ರಾತ್ರಿ 9 ಗಂಟೆಗೆ ಮುಗಿಯುತ್ತದೆ. ಇಲ್ಲಿ ಲಂಚ್ ಬದಲಿಗೆ ಡಿನ್ನರ್ ವಿರಾಮವಿರಲಿದೆ. ಚಹಾ ವಿರಾಮದ ವೇಳೆಗೆ ಫ್ಲಡ್‌ಲೈಟ್ಸ್ ಆನ್ ಮಾಡಲಾಗುತ್ತದೆ. ದಿನದಾಟದ ಕೊನೆಯ ಸೆಷನ್ (2 ಗಂಟೆ ಆಟ) ಮಾತ್ರ ಫ್ಲಡ್‌ಲೈಟ್ಸ್‌ನಲ್ಲಿ ನಡೆಯಲಿದೆ. ಆಟಗಾರರು ಬಿಳಿ ಸಮವಸ್ತ್ರದಲ್ಲೇ ಪಂದ್ಯವಾಡುತ್ತಾರೆ.

## ಎಲ್ಲಿ ಬದಲಾವಣೆ?

140 ವರ್ಷಗಳ ಇತಿಹಾಸ ಇರುವ ಟೆಸ್ಟ್ ಕ್ರಿಕೆಟ್ ಆರಂಭವಾಗಿದ್ದು 1877ರಲ್ಲಿ. ಅಲ್ಲಿಂದೀಚೆಗೆ ಹಲವು ಬದಲಾವಣೆಗಳಾಗಿವೆ. ಫೀಲ್ಡಿಂಗ್ ನಿರ್ಬಂಧ, ಹೆಲ್ಮೆಟ್ ಬಳಕೆ, ಎಲ್‌ಬಿಡಬ್ಲ್ಯು, ಮೂರನೇ ಅಂಪೈರ್, ತಂತ್ರಜ್ಞಾನ ಬಳಕೆ.. ಇತ್ಯಾದಿ.

70ರ ದಶಕದಲ್ಲಿ ಏಕದಿನ ಕ್ರಿಕೆಟ್ ಬಂದಾಗಲೇ ಟೆಸ್ಟ್‌ಗೆ ಮೊದಲ ಅಪಾಯ ಎದುರಾಯಿತು. ಬಣ್ಣದ ಸಮವಸ್ತ್ರ, ಫ್ಲಡ್‌ಲೈಟ್, ಬಿಳಿ ಚೆಂಡಿನ ಬಳಕೆ ಟೆಸ್ಟ್‌ನ ಪಾರಮ್ಯಕ್ಕೆ ಪೆಟ್ಟು ನೀಡಿತು. ಏಕದಿನ ಕ್ರಿಕೆಟ್‌ಗೆ ಪ್ರೇಕ್ಷಕರು ಮಾರು ಹೋದರು. ಬಳಿಕ ಬಂದಿದ್ದು ಟ್ವೆಂಟಿ–20 ಕ್ರಿಕೆಟ್. ಮೂರೂವರೆ ಗಂಟೆಯ ಆಟ ಒಂದು ಸಿನಿಮಾ ವೀಕ್ಷಿಸಿದಂತೆ ಎಂಬ ನಿರ್ಧಾರಕ್ಕೆ ಬಂದರು. 21ನೇ ಶತಮಾನದ ಚುಟುಕು ಕ್ರಿಕೆಟ್ ಟೆಸ್ಟ್‌ಗೆ ದೊಡ್ಡ ಹೊಡೆತ ನೀಡಿತು. ಖಾಲಿ ಕ್ರೀಡಾಂಗಣದಲ್ಲಿ ಟೆಸ್ಟ್ ಕ್ರಿಕೆಟ್ ನಡೆಯುವಂತಾಯಿತು.

## ಇಂಗ್ಲೆಂಡ್‌ನಲ್ಲೂ ಪ್ರಯೋಗ

ಇಂಗ್ಲೆಂಡ್‌ನಲ್ಲೂ ಕಳೆದ ವಾರ ಹೊನಲು ಬೆಳಕಿನ ಟೆಸ್ಟ್ ಆಯೋಜನೆ ಮೂಲಕ ಪ್ರಯೋಗ ನಡೆಸಲಾಗಿದೆ. ಬರ್ಮಿಂಗ್‌ಹ್ಯಾಮ್‌ನಲ್ಲಿ ಆತಿಥೇಯ ತಂಡದವರು ವೆಸ್ಟ್‌ಇಂಡೀಸ್ ಎದುರು ಈ ಪಂದ್ಯ ಆಡಿದ್ದಾರೆ. ಹೊನಲು ಬೆಳಕಿನಲ್ಲಿ ಆಡಿದ ಐದನೇ ಪಂದ್ಯ ಇದಾಗಿದೆ. ಈ ಹಿಂದೆ ಆಡಿಲೇಡ್‌ನಲ್ಲಿ ಎರಡು, ಬ್ರಿಸ್ಬೇನ್ ಹಾಗೂ ದುಬೈನಲ್ಲಿ ತಲಾ ಒಂದು ಪಂದ್ಯ ನಡೆದಿದ್ದವು. ಇಂಗ್ಲೆಂಡ್ ತಂಡದವರು ಮುಂಬರುವ ಆ್ಯಷಸ್ ಸರಣಿಯಲ್ಲಿ ಆಡಿಲೇಡ್‌ನಲ್ಲಿ ಆಸ್ಟ್ರೇಲಿಯಾ ಎದುರು ಹೊನಲು ಬೆಳಕಿನಲ್ಲಿ ಟೆಸ್ಟ್ ಆಡಲಿದ್ದಾರೆ. ಅದಕ್ಕಿದು ಪೂರ್ವ ತಯಾರಿ ಕೂಡ.

## ಭಾರತದಲ್ಲಿ ಈ ಪ್ರಯೋಗ ಸಾಧ್ಯವೇ?

ಈಗಾಗಲೇ ಪ್ರಾಯೋಗಿಕವಾಗಿ ದುಲೀಪ್ ಟ್ರೋಫಿ ಪಂದ್ಯವನ್ನು ಹೊನಲು–ಬೆಳಕಿನಲ್ಲಿ ನಡೆಸಲಾಗಿದೆ. ಈ ಪಂದ್ಯದಲ್ಲಿ ಗುಲಾಬಿ ವರ್ಣದ ಚೆಂಡು ಬಳಸಾಗಿತ್ತು. ಆದರೆ, ಅದು ಬೇಗನೇ ಹೊಳಪು ಕಳೆದುಕೊಂಡಿತ್ತು.

ಸದ್ಯಕ್ಕಂತೂ ಭಾರತ ತಂಡದವರು ಸ್ವದೇಶದಲ್ಲಿ ಹೊನಲು–ಬೆಳಕಿನಲ್ಲಿ ಟೆಸ್ಟ್ ಪಂದ್ಯ ಆಡುವ ಯಾವುದೇ ಲಕ್ಷಣಗಳು ಇಲ್ಲ.

ಇನ್ನೊಂದು ಸಮಸ್ಯೆ ಎಂದರೆ ಉಪಖಂಡದ ಇಬ್ಬನಿ. ಸಂಜೆಯಾಗುತ್ತಿದ್ದಂತೆ ಇಬ್ಬನಿ ಬೀಳುವುದರಿಂದ ಚೆಂಡು ಒದ್ದೆಯಾಗಲಿದ್ದು, ಸ್ಪಿನ್ನರ್‌ಗಳಿಗೆ ಸಮಸ್ಯೆ ನೀಡುತ್ತದೆ. ಈಗಾಗಲೇ ಏಕದಿನ ಕ್ರಿಕೆಟ್‌ನಲ್ಲಿ ಈ ಸಮಸ್ಯೆ ಪದೇಪದೇ ಸಂಭವಿಸುತ್ತಿದೆ. ಹಲವು ಉಪಯೋಗವೂ ಇದೆ. ಏಕೆಂದರೆ ಮಂದ ಬೆಳಕಿನಿಂದ ಆಟ ಸ್ಥಗಿತಗೊಳ್ಳುವ ಸಮಸ್ಯೆ ಇರುವುದಿಲ್ಲ.

## ಚೆಂಡಿನ ಬಣ್ಣದ ಸಮಸ್ಯೆ

ಹೊನಲು ಬೆಳಕಿನ ಪಂದ್ಯದಲ್ಲಿ ಬಳಸುವ ಚೆಂಡು ಯಾವ ಬಣ್ಣದ್ದಿರಬೇಕು ಎಂಬ ಗೊಂದಲಕ್ಕೆ ಇನ್ನೂ ತೆರೆಬಿದ್ದಿಲ್ಲ. ಸದ್ಯಕ್ಕೆ ಗುಲಾಬಿ ಬಣ್ಣದ ಚೆಂಡು ಬಳಸಲಾಗುತ್ತಿದೆ.

ಈಗಿನ ಟೆಸ್ಟ್ ಪಂದ್ಯಗಳಲ್ಲಿ ಕೆಂಪು ಚೆಂಡನ್ನು ಬಳಸಲಾಗುತ್ತದೆ. ರಾತ್ರಿ ವೇಳೆ ಕೆಂಪು ಚೆಂಡು ಬಳಸಲು ಸಾಧ್ಯವಿಲ್ಲ. ಬಿಳಿ ಚೆಂಡನ್ನು ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಬಳಸಲಾಗುತ್ತಿದೆ. ಆದರೆ, ಟೆಸ್ಟ್‌ನಲ್ಲಿ ಬಿಳಿ ಚೆಂಡು ಹೆಚ್ಚು ಬಾಳಿಕೆ ಬರುವುದಿಲ್ಲ.

## ಭಾರತದಲ್ಲಿ ಮೊದಲು ನಡೆದಿತ್ತು

ಭಾರತದಲ್ಲಿ ಕೂಡ ದೇಸಿ ಕ್ರಿಕೆಟ್‌ನಲ್ಲಿ ಹೊನಲು ಬೆಳಕಿನ ಪ್ರಯೋಗ ಮಾಡಲಾಗಿತ್ತು. ಆದರೆ, ಆ ಪ್ರಯೋಗ ಯಶಸ್ವಿಯಾಗಿರಲಿಲ್ಲ. ಹೀಗಾಗಿ, ಹೊನಲು ಬೆಳಕಿನ ಟೆಸ್ಟ್‌ಗೆ ಬಿಸಿಸಿಐ ಅಷ್ಟೊಂದು ಆಸಕ್ತಿ ತೋರಿಸಿರಲಿಲ್ಲ.

1997ರ ಏಪ್ರಿಲ್‌ನಲ್ಲಿ ಮುಂಬೈ ಮತ್ತು ದೆಹಲಿ ತಂಡಗಳ ನಡುವೆ ರಣಜಿ ಟ್ರೋಫಿ ಫೈನಲ್ ಪಂದ್ಯವನ್ನು ಗ್ವಾಲಿಯರ್‌ನ ಕ್ಯಾಪ್ಟನ್ ರೂಪ್ ಸಿಂಗ್ ಕ್ರೀಡಾಂಗಣದಲ್ಲಿ ಹೊನಲು ಬೆಳಕಿನಲ್ಲಿ ಆಯೋಜಿಸಲಾಗಿತ್ತು.

ವಿಪರೀತ ಇಬ್ಬನಿಯಿಂದಾಗಿ ಬೌಲರ್‌ಗಳು ತೊಂದರೆ ಅನುಭವಿಸಿದರೆ, ಫೀಲ್ಡರ್‌ಗಳಿಗೆ ಚೆಂಡನ್ನು ಸರಿಯಾಗಿ ಹಿಡಿಯಲು ಸಾಧ್ಯವಾಗಿರಲಿಲ್ಲ. ಎರಡೂ ತಂಡಗಳ ನಾಲ್ವರು ಬೌಲರ್‌ಗಳು 100ಕ್ಕೂ ಅಧಿಕ ರನ್ ಬಿಟ್ಟುಕೊಟ್ಟಿದ್ದರು. ಮೊದಲು ಬ್ಯಾಟ್ ಮಾಡಿದ್ದ ಮುಂಬೈ 630 ರನ್ ಗಳಿಸಿತ್ತು. ಇದಕ್ಕೆ ಉತ್ತರವಾಗಿ ಇನಿಂಗ್ಸ್ ಆರಂಭಿಸಿದ್ದ ದೆಹಲಿ ಅಂತಿಮ ದಿನ 559 ರನ್‌ಗಳಿಗೆ ಆಲೌಟಾಗಿತ್ತು. ಎರಡು ಇನಿಂಗ್ಸ್ ಮುಗಿಯಲು ಐದು ದಿನ ಬೇಕಾಗಿತ್ತು.

ಅದೇನೇ ಇರಲಿ, ಟ್ವೆಂಟಿ–20 ರೆಂಬೆ ಕೊಂಬೆಗಳಿದ್ದಂತೆ. ಟೆಸ್ಟ್ ಕ್ರಿಕೆಟ್ ಮರದ ಗಟ್ಟಿಯಾದ ಬೇರುಗಳಿದ್ದಂತೆ. ಎಷ್ಟೇ ಕಾಲ ಉರುಳಿದರೂ ಬೇರು ಗಟ್ಟಿಯಾಗಿರುತ್ತದೆ. ಮತ್ತಷ್ಟು ಬಲಗೊಳ್ಳುತ್ತಾ ಸಾಗುತ್ತದೆ. ದೀರ್ಘ ಕಾಲ ಉಳಿಯುತ್ತದೆ. ಆದರೆ, ಜನಪ್ರಿಯತೆ ಉಳಿಸಲು ಕೆಲವೊಂದು ಪ್ರಯೋಗ ಅಗತ್ಯ.